ದಿನಾಂಕಃ 13/07/2021 ರಂದು ಸಾಕ್ಷಿಯನ್ನು ಪುನಃ ಕರೆಸಿಯಿಸಿ ಪ್ರಮಾಣೀಕರಿಸಲಾಯಿತು.

**ಮುಂ.ಪಾಟೀ ಸವಾಲುಃ 7 ರಿಂದ 9 ನೇ ಪ್ರತಿವಾದಿಗಳ ಪರ ಶ್ರೀ ಎನ್ ವಾಯ್ ಪಿ ವಕೀಲರಿಂದಃ**

1) ನಮ್ಮ ತಂದೆ ಕಾಳು ಕಡ್ಡಿ ವ್ಯಾಪಾರ ಮಾಡುತಿದ್ದ ಬಗ್ಗೆ ನನ್ನ ವಾದ ಪತ್ರದಲ್ಲಿ ಬರೆಸಿಲ್ಲ. ನಮ್ಮ ತಾತಾ ಯಲ್ಲಪ್ಪ ಮತ್ತು ಅಜ್ಜಿ ಮರಿತೆಂಗೆಮ್ಮರವರಿಗೆ ಇಬ್ಬರು ಗಂಡು ಮಕ್ಕಳು ಮತ್ತು ಮೂರು ಜನ ಹೆಣ್ಣು ಮಕ್ಕಳು ಇರುತ್ತಾರೆ. ಅವರುಗಳು ಹೆಸರು ಸಕ್ರವ್ವ, ಸಿದ್ಲಿಂಗಪ್ಪ, ಚೆನ್ನಪ್ಪ, ಪಾರ್ವತವ್ವ ಮತ್ತು ಸಾವಕ್ಕ ಎಂದು ಇರುತ್ತದೆ. ಈ ಪೈಕಿ ಸಕ್ರವ್ವ ಮತ್ತು ಚೆನ್ನಪ್ಪ ತೀರಿಕೊಂಡಿರುತ್ತಾರೆ. ಸಕ್ರವ್ವರವರ ಗಂಡ ಮಹಾದೇವಪ್ಪ ಸಹ ತೀರಿಕೊಂಡಿರುತ್ತಾರೆ. ಸಕ್ರವ್ವ ಮತ್ತು ಮಹಾದೇವಪ್ಪರವರಿಗೆ ಯಲ್ಲವ್ವ ಒಬ್ಬಳೇ ಮಗಳಾಗಿದ್ದು, ಈ ದಾವೆಯಲ್ಲಿ ಪ್ರತಿವಾದಿ 7 ಎ ಆಗಿರುತ್ತಾರೆ. ಚೆನ್ನಪ್ಪ ಹೆಂಡತಿ ನೀಲವ್ವ ಸಹ ತೀರಿಕೊಂಡಿರುತ್ತಾರೆ. ಚೆನ್ನಪ್ಪ ಮತ್ತು ನೀಲಪ್ಪರವರಿಗೆ ಮಕ್ಕಳು ಇರುವುದಿಲ್ಲ. ನನ್ನ ದಾವೆಯಲ್ಲಿ ಪ್ರತಿವಾದಿ 7 ರಿಂದ 9 ನೇ ಪ್ರತಿವಾದಿಗಳನ್ನು ದಾವಾ ಮಾಡುವ ಸಮಯದಲ್ಲಿ ಸೇರಿಸದೇ ಇರುವುದರಿಂದ ದಾವೆ ಊರ್ಜಿತವಾಗುವುದಿಲ್ಲ ಎಂದರೆ ಸರಿಯಲ್ಲ.

2) 1, 7 ರಿಂದ 9 ಮತ್ತು ಮೃತ ಚೆನ್ನಪ್ಪರವರ ನಡುವೆ ಈ ಹಿಂದೇ ಯಾವುದೇ ವಿಭಾಗ ಆಗಿರುವುದಿಲ್ಲ. ಸದರಿಯವರು ಒಟ್ಟು ಕುಟುಂಬದ ಸದಸ್ಯರಾಗಿರುತ್ತಾರೆ ಎಂದರೆ ಸರಿಯಲ್ಲ. (ಸಾಕ್ಷಿ ಮುಂದುವರೆದು ಸದರಿಯವರಿಗೆ ಈ ಹಿಂದೇಯೇ ಭಾಗ ನೀಡಿರುತ್ತಾರೆ ಎಂದು ನುಡಿಯುತ್ತಾರೆ.) ಭಾಗ ನೀಡಿದ ಬಗ್ಗೆ ಯಾವುದೇ ದಾಖಲೆ ಇರುವುದಿಲ್ಲ. ಸದರಿಯವರಿಗೆ ಹಣ ನೀಡಿದ ಬಗ್ಗೆ ನನ್ನ ತಾತಾನವರಿಗೆ ಗೊತ್ತು, ನನಗೆ ಗೊತ್ತಿಲ್ಲ. ನಮ್ಮ ತಂದೆ ಮತ್ತು ಮೃತ ಚೆನ್ನಪ್ಪರವರ ನಡುವೆ ದಾವಾ ಆಸ್ತಿ ಮತ್ತು ಎದುರು ಮಾಗಣಿ(Counter Claim) ಆಸ್ತಿಗೆ ಸಂಬಂಧಪಟ್ಟಂತೆ ವಿಭಾಗ ಆಗಿಲ್ಲ.

3) ನಾವು ಎಷ್ಟು ಆಸ್ತಿಗಳಿಗೆ ದಾವೆ ಮಾಡಿರುತ್ತೇವೆ ಎಂದು ಗೊತ್ತಿಲ್ಲ. ಸದರಿ ಆಸ್ತಿಗಳ ವಿಸ್ತೀರ್ಣ ಮತ್ತು ಸರ್ವೇ ನಂಬರ ಗೊತ್ತಿಲ್ಲ. 7 ರಿಂದ 9 ನೇ ಪ್ರತಿವಾದಿಗಳ ಪ್ರಕಾರ ಒಟ್ಟು ಕುಟುಂಬಕ್ಕೆ ಹತ್ತು ಜಮೀನುಗಳು ಮತ್ತು ಎರಡು ಮನೆಗಳು ಇರುತ್ತವೆ ಎಂದರೆ ಸರಿಯಲ್ಲ. ಸದರಿ ಆಸ್ತಿಗಳು ಪಿತ್ರಾರ್ಜಿತ ಆಸ್ತಿಗಳು ಎನ್ನುವುದು ನನಗೆ ಗೊತ್ತಿಲ್ಲ. ನಾನು ಆಸ್ತಿಯಲ್ಲಿ ಭಾಗ ಕೋರಿ ದಾವೆ ಮಾಡಿರುತ್ತೇನೆ. ದಾವಾ ಆಸ್ತಿಗಳು ಹೇಗೆ ಬಂದವು ಎಂದು ನನಗೆ ಹೇಳಲು ಆಗುವುದಿಲ್ಲ. ದಾವಾ ಆಸ್ತಿಗಳು 1 ಮತ್ತು 7 ರಿಂದ 9

ಪ್ರತಿವಾದಿಗಳ ಸ್ವಾಧೀನದಲ್ಲಿ ಇರುತ್ತದೆ ಎಂದರೆ ಸರಿ. ವಾದಿಗಳು ಮತ್ತು 2 ರಿಂದ 6 ನೇ ಪ್ರತಿವಾದಿಗಳಿಗೆ ಎದುರು ಮಾಗಣಿ ಆಸ್ತಿಗಳಲ್ಲಿ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ಎದುರು ಮಾಗಣೆಯ ಆಸ್ತಿ 1 ಮತ್ತು 7 ರಿಂದ 9 ನೇ ಪ್ರತಿವಾದಿಗಳಿಗೆ ಮಾತ್ರ ಸೇರಿದ ಆಸ್ತಿಗಳು ಎಂದರೆ ಸರಿ. ಎದುರು ಮಾಗಣಿ ಆಸ್ತಿಯಲ್ಲಿ 1 ಮತ್ತು 7 ರಿಂದ 9 ನೇ ಪ್ರತಿವಾದಿಗಳಿಗೆ ತಲಾ ¼ ನೇ ಭಾಗ ಬರಬೇಕಾಗುತ್ತದೆ ಎನ್ನುವುದು ನನಗೆ ಗೊತ್ತಿಲ್ಲ.

( ಈ ಹಂತರದಲ್ಲಿ ಪ್ರತಿವಾದಿ ಪರ ವಕೀಲರು ದಾಖಲೆ ಹಾಜರು ಮಾಡಲು ಕಾಲಾವಕಾಶ ಕೋರಿದ್ದು, ಕೋರಿಕೆಯ ಮೇರೆಗೆ ಪಾಟೀ ಸವಾಲನ್ನು ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದಂತೆ ನನ್ನ ಉಕ್ತಲೇಖನಕ್ಕೆ ದಿಃ13-07-2021 ರಂದು ಬೆಳಿಗ್ಗೆ 12ಃ09 ರಿಂದ 12ಃ41 ಗಂಟೆಯವರೆಗೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೆ ಸರಿ ಇದೆ

Sd/-

ಹಿರಿಯ ದಿವಾಣಿ ನ್ಯಾಯಾಧೀಶರು,

ಕುಂದಗೋಳ.